

ಬೆಟ್ಟಬಯಲನು ಹಬ್ಬಿ
ನಿಂತ ಹಸುರುಹಾಸಿನಲಿ
ಮೂಡಿರುವ ನೀರಗೆರೆ



ಮಾಗೋಡು ಪರಿಸರದ
ಅಪೂರ್ವ ಚೆಲುವು

ಅನ್ನೋದರೊಳಗೆ – 'ಬೈ, ಟಾಟಾ, ಸೀ ಯು' ಎಂದು ಸಿಳ್ಳೆ ಹಾಕಿ ಪುರ್ರಂತ ಹಾರಿಹೋಗುವ ಹಕ್ಕಿಯಂತೆ ಮರೆಯಾಗುತ್ತಿತ್ತು.

ಅಲ್ಲಿಯ ದಟ್ಟ ಕಾಡಿನ ನಡುವೆ ಕಾಲು ದಾರಿಯಗುಂಟ ನದಿಯ ಏರು ದನಿಯ ಮಾತುಗಳಿಗೆ ಕಿವಿಯಾಗಿ ಗಿಡ ಮರಗಳಿಂದ ತೂರಿ ಹಾರಿಬರುತ್ತಿದ್ದ ಮೋಡಗಳಿಗೆ ತಲೆ ಬಾಗಿ, ಅಲ್ಲಲ್ಲಿ ನಿಂತು ಫೋಟೊಗಳಿಗೆ ಶರಣಾಗಿ ಅನತಿ ದೂರ ಸಾಗಿದರೆ ಬಲ ಭಾಗದ ದೂರದ ಬೆಟ್ಟದಲ್ಲೊಂದು ಹಾಲ್ನೊರೆಯ ಚೆಲುವೆಯ ದರ್ಶನವಾಗಬೇಕೆ? ಆಕೆ ಮಳೆಗಾಲದ ಸುಂದರಿ. ನಾನು ಇದಕ್ಕೂ ಮೊದಲು ಮಾಗೋಡು ನೋಡಲು ಹತ್ತಾರು ಬಾರಿ ಬಂದಿದ್ದೆನಾದರೂ ಈ ಚೆಲುವೆಯನ್ನು ಕಾಣಲಾಗಿರಲಿಲ್ಲ. ಶಿರಸಿ ಕಡೆಯಿಂದ ಹರಿದು ಗಂಗಾವಳಿಯೊಳಗೆ ಧುಮ್ಮಿಕ್ಕುವ ಹೆಸರೇಳಲಿಚ್ಛಿಸದ ಕನ್ನೆಯಂತೆ ಅವಳು! ಆ ಸೃಷ್ಟಿ ಸೌಂದರ್ಯಕ್ಕೆ ಮನಸೋಲದ ಅರಸಿಕರು ನಮ್ಮೊಳಗೆ ಯಾರೂ ಇರಲಿಲ್ಲವಾದ್ದರಿಂದ ಹತ್ತು ನಿಮಿಷದ ಹಾದಿಯನ್ನು ಎರಡು ತಾಸಿಗೆ ಲಂಬಿಸಿ ಚುಂಬಿಸಿ ಖುಷಿಪಟ್ಟೆವು! ಕುಂತಲ್ಲಿ ನಿಂತಲ್ಲಿ ಫೋಟೊಗಳದೇ ಕಾರುಬಾರು!

ದಿನ ನಿತ್ಯದ ಜನ ಜಂಗುಳಿಯ ನಡುವಿನ ಗಡಿಬಿಡಿಯ ಧಾವಂತದ ಓಡು ಓಡು ಓಡೂ ಬದುಕಿನಿಂದ ಒಂದರೆ ಗಳಿಗೆಯಾದರೂ ಬಿಡಿಸಿಕೊಂಡು ಇಲ್ಲಿಗೆ ಬಂದದ್ದು ಜನ್ಮ ಸಾರ್ಥಕವೆನ್ನುವಂತೆ ಮಾಡಿತ್ತು.

ಬಿಸಿ ಬಿಸಿ ಇಡ್ಲಿ ಸಾಂಬಾರ್ – ಚಟ್ನಿ, ಘಮ್ ಎಂಬ ಕಾಫಿ ಹೊಟ್ಟೆ ಹಸಿವನ್ನು ನೀಗಿಸಿ ಜೇನುಕಲ್ಲು ಗುಡ್ಡದ ಕಡೆಗೆ ನೂಕಿತ್ತು. ಮಾಗೋಡುವಿನಿಂದ 5 ಕಿ.ಮೀ. ಕಾಡ ನಡುವಿನ ದೂರದ ದಾರಿ. ದಾರಿಯುದ್ದಕ್ಕೂ ಕಾಡು, ಕಾಡಿನ ನಡುವಿನ ಪಕ್ಷಿಗಳ ಕೂಗು, ಅಲ್ಲಲ್ಲಿ ಗದ್ದೆ ನಾಟಿ ಮಾಡುವ ಜನ, ಮಳೆ ರಚ್ಚೆ ಹಿಡಿದ ಮಗುವಿನಂತೆ ಬಿಟ್ಟೂ ಬಿಡದೆ ಹಿಂಬಾಲಿಸಿತ್ತು. ಹಳ್ಳ, ಕಾಲುವೆಗಳು ತುಂಬಿ ಹರಿದು ರಸ್ತೆಯ ಹೊಂಡದೊಳಗೆ ಪ್ರಶಾಂತ ಮಲಗಿಬಿಟ್ಟಿತ್ತು.

ಜೇನುಕಲ್ಲು ಗುಡ್ಡ ಈಗ ನವೀಕರಣಗೊಂಡು ನವ ವಧುವಿನಂತೆ ಸಿಂಗರಿಸಿಕೊಂಡು ಬೀಗುತ್ತಿತ್ತು. ಇದಕ್ಕೆ ಕಾರಣಕರ್ತರಾದ ಅರಣ್ಯ ಇಲಾಖೆಗೆ ಅಭಿನಂದನೆಗಳನ್ನು ಸಲ್ಲಿಸಲೇಬೇಕು. ಬೇಡ್ತಿ (ಮುಂದೆ ಗಂಗಾವಳಿ) ಎದೆ ತುಂಬಿ ಹಾಡುತ್ತಾ ವಿಶಾಲ ಬಯಲೊಳಗೆ ಬಯಲಾಗಿ ಬೆಟ್ಟಗುಡ್ಡದ ವಿಸ್ತಾರದೊಳಗೆ ಕಣ್ಣು ಕಾಣುವ ದೂರದವರೆಗೂ ಅಂಕುಡೊಂಕಾಗಿ ಸಾಗುತ್ತಾಳೆ. ನಿಮಿಷವೂ ವರಪು ಕೊಡದ ಮಳೆ ರೊಯ್ಯನೆ ಬೀಸುವ ಗಾಳಿಯ ಜೊತೆಗೆ ಜುಗಲಬಂದಿಗೆ ಇಟ್ಟುಕೊಂಡಿದೆ. ಅಲ್ಲಿದ್ದ ಕುಟೀರಗಳು ಅಸಹಾಯಕರಾಗಿ, 'ನಾನಾರಿಗೂ ಚಾಟು ನೀಡಲಾರೆ; ಕ್ಷಮಿಸಿ' ಎಂಬಂತೆ ತಾನೂ ತೊಯ್ದು ತೊಪ್ಪೆಯಾಗಿ ಗಡಗಡ ನಡುಗುತ್ತಿರುವಂತೆ ಭಾಸವಾಯ್ತು. ತೆರೆದ ಕೊಡೆಗಳು ಬೀಸುವ ಗಾಳಿಯ ರಭಸಕ್ಕೆ ತಿರುವು ಮುರುವಾಗಿ ನಿಂತು ನಾಚಿಕೊಂಡವು. ಮಳೆನಿಂತು ಮೋಡಗಳು ಸರಿದು ಕಣಿವೆಯ ಸ್ನಿಗ್ಧ ಸೌಂದರ್ಯವನ್ನು ಸವಿದು ಒಂದೆರಡು ಫೋಟೊ ಹೊಡೆಸಿಕೊಳ್ಳಬೇಕು ಎನ್ನುವುದರೊಳಗೆ ಮತ್ತೆ ಮಳೆ ವಕ್ಕರಿಸಿಬಿಡುತ್ತಿತ್ತು. ಹಾಗೂ ಹೀಗೂ ಒಂದೆರಡು ತಾಸು ಜೇನುಕಲ್ಲಿನೊಡನೆ ಸಂಭಾಷಣೆಗಿಳಿದು, ಅವಳ ಎದೆಯಾಳದ ನಾಲ್ಕು ಪಿಸುಮಾತುಗಳನು ಕೇಳಿ ಆನಂದಿಸಿದ್ದಾಯ್ತು. ಮಧ್ಯಾಹ್ನದ ಊಟದ ಸಮಯ ಮೀರಬಾರದೆಂದು ಮತ್ತೆ ಮಾಗೋಡುವಿನ ಮಡುವಿಗೆ ಧಾವಿಸಿ ಬಂದೆವು. ಹಾಗೆ ಬರುತ್ತಾ ಒಂದೆರಡು ಕಿಲೋಮೀಟರ್ ದೂರದಲ್ಲಿಯೇ ನಾನು ಮತ್ತು ಗೆಳೆಯ ಗಬ್ಬೂರ್ ಇಳಿದು, ಅಲ್ಲಿಂದ ಕಾಡ ದಾರಿಯ ಮಾತು ಮೌನದೊಂದಿಗೆ ಹೆಜ್ಜೆ ಹಾಕುತ್ತಾ ಸಾಗಿದೆವು. ಊಟ ಮಾಡಿ 'ನಾವಿನ್ನು ಹೊರಡುತ್ತೇವೆ' ಎಂದು ಹೊರಟು ನಿಂತ ಗೆಳೆಯರಿಗೆ 'ಟಾಟಾ' ಮಾಡಿ, ನಾನು ಮತ್ತು ಗಬ್ಬೂರ್ ಅದೊಂದು ರಾತ್ರಿ ಅಲ್ಲಿಯೇ ಉಳಿಯುವುದೆಂದು ನಿರ್ಧರಿಸಿ ನಿಂತುಬಿಟ್ಟೆವು.

ಮತ್ತದೇ ನಿರಂತರ ಸದ್ದು – ಶಿವನೇ ಧರೆಗಿಳಿದು ಢಮರು ನಿನಾದದೊಂದಿಗೆ ತಾಂಡವ ನೃತ್ಯಗೈದಂತೆ 'ದಬದಬದ...'. ಊಟ ಮಾಡಿ ಸಣ್ಣದೊಂದು ನಿದ್ದೆ ತೆಗೆದೆದ್ದು, ಮೈಮನವೆಲ್ಲಾ ಕಣ್ಣು ಕಿವಿಯಾಗಿ ಆಲಿಸುತ್ತಾ ಮಲಗೆದ್ದು ಮತ್ತೊಂದು ಸುತ್ತು ಅಲ್ಲಿಯ ಕಾಡ ದಾರಿಯೊಳಗೆ ಕಾಲೆಳೆದುಕೊಂಡು ಹೋಗಿ ಬಂದೆವು. ನಮ್ಮ ಮಾತುಕತೆಯೊಳಗೆ ಅದೆಷ್ಟೋ ವಿಷಯಗಳು ಮಳೆಯ ಹಾಡಿನಂತೆ ಜೊತೆಯಾಗಿ ನೀರಿನಂತೆ ಹರಿದು ಹೋದವು. ಅದು ವ್ಯರ್ಥವೋ ತೀರ್ಥವೋ ತಿಳಿಯದಾದೆವು. ಪ್ರಸ್ತುತ ರಾಜಕಾರಣದ ಜೊತೆಗೆ ಅಂಬೇಡ್ಕರ್ ಆದಿಯಾಗಿ ಬುದ್ಧ ಬಸವ ಗಾಂಧಿ ಇವರೆಲ್ಲಾ ಇದ್ದದ್ದು ವಿಶೇಷವೇನೂ ಆಗಿರಲಿಲ್ಲ. ಕವಿ ಪುಂಗವರ ಹಾಡುಗಳಿಗಂತೂ ಬರವೇ ಇರಲಿಲ್ಲ. ಕುವೆಂಪು, ತೇಜಸ್ವಿ, ಬೇಂದ್ರೆ ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಬಂದು ಹೋದರು.

ರಾತ್ರಿಯ ಊಟದ ರುಚಿ ಮಳೆಯ ನಿನಾದದ ಜೊತೆಗೆ ವಿಶೇಷ ಸವಿಯನ್ನು ಒದಗಿಸಿತ್ತು. ನಿದ್ದೆ ಅದೆಲ್ಲಿಗೋ ಓಡಿಹೋಗಿ ಅವಿತುಕೊಂಡಂತೆ ಎಷ್ಟು ಕರೆದರೂ ಬಾರದೆ 'ದಬದಬದಬದಬ...' ಸದ್ದಿಗೆ ಮಾರುಹೋಗಿತ್ತು.

ಮರುದಿನ ಮುಂಜಾನೆ ಆರಕ್ಕೆಲ್ಲಾ ಎದ್ದು ಮೋಡದೊಳಗೆ ಮುಳುಗಿದ್ದ ಮಾಗೋಡು ಮಮತಾಮಯಿ ಬೇಡ್ತಿಗೆ (ಹ, ಒಂದು ಮಾತು, ಈ ಬೇಡ್ತಿ ನಮ್ಮ ಹುಬ್ಬಳ್ಳಿಯ ಉಣಕಲ್ಲಿನವಳಂತೆ!) ನಮನ ಸಲ್ಲಿಸಿ, 'ಹೋಗಿ ಬಾ ನನ ಕಂದ' ಎಂಬ ತಾಯ ಸೊಲ್ಲನೊಂದನು ಎದೆಯೊಳಗೆ ಹುದುಗಿಸಿಕೊಂಡು, ಉಲ್ಲಸಿತ ಮನಸಿನೊಂದಿಗೆ ಊರ ದಾರಿಯ ಕಡೆಗೆ ಮುಖ ಮಾಡಿದೆವು.

ಎದೆಯೊಳಗೆ ಅದೇ ದಬದಬದಬ...

ಪ್ರತಿಕ್ರಿಯಿಸಿ: feedback@sudha.co.in